## ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಶಾಹಾಪೂರ.

## ಸಿ.ಸಿ ನಂಃ **967/2019**

| | | |
|---|---|---|
| ಸಾಕ್ಷಿಯ ಹೆಸರಃ | ಜಟ್ಟೆಪ್ಪ | ಪ್ರಾಸಾಃ **5** |
| ತಂದೆ/ಗಂಡನ ಹೆಸರುಃ | ಭೀಮಣ್ಣ | ಚಾಸಾಃ **8** |
| ವಯಸ್ಸುಃ | **38** ವರ್ಷ | ದಿಃ **18.08.2025** |
| ಉದ್ಯೋಗಃ | ಅಬಕಾರಿ ನೀರಿಕ್ಷಕರು | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಶಹಾಪೂರ | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ

ನಾನು ದಿ.25.02.2019 ರಿಂದ 10.06.2019 ರವರೆಗೆ ಅಬಕಾರಿ ಶಹಾಪೂರ ವಲಯದಲ್ಲಿ ಅಬಕಾರಿ ಉಪ ನೀರಿಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆತ್ತೇನೆ.

ದಿಃ 20.03.2019 ರಂದು ನಾನು ಸದರಿ ಪ್ರಕರಣದ ಕಡತವನ್ನು ಚಾಸಾ. 1 ರವರಿಂದ ಪಡೆದುಕೊಂಡು ಪರಿಶೀಲಿಸಿ ಅದೇ ದಿವಸ ಚಾಸಾ.4 ಮತ್ತು 5 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ.06.05.2019 ರಂದು ಸದರಿ ಪ್ರಕರಣದ ಮಾದರಿ ಮು.ಮಾಲುಗಳನ್ನು ಚಾಸಾ.6 ರವರ ಕಡೆಯಿಂದ FSL ಗೆ ಕಳುಹಿಸಿ ಕೊಟ್ಟು ದಿ.08.05.2019 ರಂದು ಸದರಿ ಪ್ರಕರಣದಲ್ಲಿ ಜಪ್ತಿ ಪಡಿಸಿಕೊಂಡ ವಾಹನದ ಮಾಲೀಕತ್ವ ಕುರಿತು RTO ಯಾದಗಿರಿ ಯವರಿಗೆ ಪತ್ರ ಬರೆದಿರುತ್ತೇನೆ. ದಿ.27.05.2019 ರಂದು ಚಾಸಾ.6 ರವರಿಂದ ರಾಸಾಯನಿಕ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿ.29.05.2019 ರಂದು RTO ಯಾದಗಿರಿ ಯಿಂದ ವಾಹನದ ಮಾಲೀಕತ್ವದ ವರದಿಯನ್ನು ಪಡೆದುಕೊಂಡಿರುತ್ತೇನೆ . ನಂತರ ತನಿಖೆ ಪೂರ್ಣಗೊಳಿಸಿ ಆರೋಪಿತನ ವಿರುದ್ದ ದಿ.07.06.2019 ರಂದು ದೋಷರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಈಗಾಗಲೇ ಗುರುತಿಸಲಾಗಿರುವ ನಿಪಿ-2 ನ್ನು ಸಾಕ್ಷಿಗೆ ತೋರಿಸಿ ಅದರಲ್ಲಿರುವ ಸಹಿಯನ್ನು ನಿಪಿ-2(ಬಿ) ಎಂದು, ದಿ.08.05.2019 ರ ಅರ್ಜಿ ನಿಪಿ-4 ಎಂದು, ಅರದಲ್ಲಿರುವ ಸಹಿಯನ್ನು ನಿಪಿ-4(ಎ) ಎಂದು, RTO ವರದಿಯನ್ನು ನಿಪಿ-5 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಯು.ಬಿ.ಎಂ ವಕೀಲರಿಂದಃ</u>

ನಾನು ಚಾಸಾ.1 ರವರಿಂದ ಕಡತವನ್ನು ಪಡೆಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ.4 ಮತ್ತು 5 ರವರ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. RTO ಯಾದಗಿರಿಯವರಿಗೆ ವಾಹನದ ಮಾಲೀಕತ್ವ ಕುರಿತು ಪತ್ರ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. RTO ವರದಿಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ . ಚಾಸಾ.6 ರವರ ಕಡೆಯಿಂದ ಮು.ಮಾಲುಗಳನ್ನು FSL ಗೆ ಕಳುಹಿಸಿ ಕೊಟ್ಟು ಸುಳ್ಳು ವರದಿಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ ಆರೋಪಿತನಿಗೆ ತೊಂದರೆ ಕೊಡುವುದಕ್ಕಾಗಿ ಸುಳ್ಳು ದೋಷರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಧೀಶರು
ಶಾಹಾಪೂರ.